ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	373
ಸದಸ್ಯರ ಹೆಸರು	:	ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ, (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	15-09-2021.
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಷ್ಟ್ರೀಯ ಹೆದ್ದಾರಿ 66ರ ಮುಖಾಂತರ ಕುಂದಾಪುರ ನಗರಕ್ಕೆ ಯಾವ ಯಾವ ಭಾಗದಲ್ಲಿ ಪ್ರವೇಶಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ; ಪುರಸಭಾ ವ್ಯಾಪ್ತಿಯ ಬೊಬ್ಬರ್ಯ ಕಟ್ಟೆಯ ಬಳಿ ಕುಂದಾಪುರ ನಗರಕ್ಕೆ ಪ್ರವೇಶ ಕಲ್ಪಿಸುವ ಬಗ್ಗೆ ಸಾರ್ವಜನಿಕರಿಂದ ಬೇಡಿಕೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರದ ಕ್ರಮವೇನು;	ರಾಷ್ಟ್ರೀಯ ಹೆದ್ದಾರಿ-66 ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರ ಸುಪರ್ದಿಯಲ್ಲಿದ್ದು ಸದರಿ ಹೆದ್ದಾರಿಯ ಮುಖಾಂತರ ಕುಂದಾಪುರ ನಗರಕ್ಕೆ ಪ್ರವೇಶ ಕಲ್ಪಿಸುವ ಕುರಿತು ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ. • ರಾಷ್ಟ್ರೀಯ ಹೆದ್ದಾರಿ-66 ರ ಕಿ.ಮೀ. 283.300 ಮತ್ತು ಕಿ.ಮೀ. 285.550ರಲ್ಲಿ ಕುಂದಾಪುರ ನಗರಕ್ಕೆ ಪ್ರವೇಶ ಮತ್ತು ನಿರ್ಗಮನಕ್ಕಾಗಿ ಸರ್ವೀಸ್ ರಸ್ತೆ ಮಧ್ಯದ ತೆರೆಯುವಿಕೆಗಳನ್ನು ಒದಗಿಸಲಾಗಿದೆ. • ಇದಲ್ಲದೆ, ಮಾನ್ಯ ಲೋಕಸಭಾ ಸದಸ್ಯರುಗಳಾದ ಶ್ರೀ ಆಸ್ಕರ್ ಫರ್ನಾಂಡೀಸ್ ಮತ್ತು ಶ್ರೀ ಜೈಪ್ರಕಾಶ್ ಹೆಗ್ಡೆ ಇವರ ಕೋರಿಕೆಯ ಮೇರೆಗೆ ಸದರಿ ಹೆದ್ದಾರಿಯ ಕಿ.ಮೀ.284.000 ರಲ್ಲಿ ಫ್ಲೈಓವರ್, ಕಿ.ಮೀ.284.990 ರಲ್ಲಿ ವೆಹಿಕ್ಯುಲಾರ್ ಅಂಡರ್ ಪಾಸ್ (ವಿಯುಪಿ), ಕಿ.ಮೀ.283.705ರಲ್ಲಿ ಮತ್ತು ಕಿ.ಮೀ.285.185 ರಲ್ಲಿ ಪೆಡೆಸ್ಟ್ರಿಯನ್ ಅಂಡರ್ ಪಾಸ್ (ಪಿಯುಪಿ) ನ್ನು ನಿರ್ಮಿಸಲಾಗಿದೆ. • ಕುಂದಾಪುರ ನಗರಕ್ಕೆ ರಾಷ್ಟ್ರೀಯ ಹೆದ್ದಾರಿ-66 ಕಿ.ಮೀ. 284.00 (ಫ್ಲೈ ಓವರ್) ಮತ್ತು ಕಿ.ಮೀ.284.990 (ವಿಯುಪಿ) ನಡುವೆ ಪ್ರವೇಶ ಮತ್ತು ನಿರ್ಗಮನಕ್ಕಾಗಿ ಸರ್ವೀಸ್ ರೋಡ್ ಮೀಡಿಯನ್ ತೆರೆಯುವ ಮನವಿಯನ್ನು ಸ್ವತಂತ್ರ ಇಂಜಿನಿಯರ್ (ಇಂಡಿಪೆಂಡೆಂಟ್ ಇಂಜಿನಿಯರ್) ರವರು ಪರಿಶೀಲಿಸಿದ್ದು ಸದರಿಯವರ ವರದಿಯ ಪ್ರಕಾರ ಸದರಿ ಭಾಗವು ಕಣಿವೆಯ ಭಾಗವಾಗಿದ್ದು, ಈ ಭಾಗದಲ್ಲಿ ಸರ್ವೀಸ್ ರೋಡ್ ಮೀಡಿಯನ್ ನಿರ್ಮಿಸಿದ್ದಲ್ಲಿ ವಾಹನಗಳು ಹೆಚ್ಚಿನ ವೇಗದಲ್ಲಿ ಸಂಚರಿಸುವ ಕಾರಣ ರಸ್ತೆ ಅಪಘಾತಗಳು ಸಂಭವಿಸುವ ಸಾಧ್ಯತೆಯಿದ್ದು ಕಪ್ಪು ಚುಕ್ಕೆಗಳ ಸ್ಥಳಕ್ಕೆ ಕಾರಣವಾಗುತ್ತದೆ. ಆದಕಾರಣ ಸದರಿ ಭಾಗದಲ್ಲಿ ಸರ್ವೀಸ್ ರೋಡ್ ಮೀಡಿಯನ್‌ನ್ನು ನಿರ್ಮಿಸುವುದು ಸೂಕ್ತವಲ್ಲ ಎಂದು ವರದಿಸಿರುತ್ತಾರೆ.

ಆ)	ಕುಂದಾಪುರ ಪುರಸಭಾ ವ್ಯಾಪ್ತಿಯ ಶಾಸ್ತ್ರೀ ಸರ್ಕಲ್ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಮೇಲು ಸೇತುವೆಯ ಅಡಿಪಾಯದಲ್ಲಿ ಕಳೆದ ಹಲವು ವರ್ಷಗಳಿಂದ ಹಾಕಲಾದ ನಿರ್ಮಾಣ ಸಾಮಗ್ರಿ ಮತ್ತು ಗುಜರಿ ಸಾಮಗ್ರಿಗಳಿಂದ ಸಾರ್ವಜನಿಕರಿಗೆ ಕಿರಿಕಿರಿಯಾಗುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ; ನಗರ ಸೌಂದರ್ಯ ಕಾಪಾಡುವ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಈ ಸಾಮಗ್ರಿಗಳನ್ನು ಯಾವಾಗ ತೆರವು ಮಾಡಲಾಗುವುದು;	ಜಂಕ್ಷನ್ ಅಭಿವೃದ್ಧಿ ಮತ್ತು ಮೆಟೀರಿಯಲ್ ಶಿಫ್ಟಿಂಗ್ ಕೆಲಸಗಳನ್ನು ಮಳೆ ತಗ್ಗಿದ ನಂತರ ಪೂರ್ಣಗೊಳಿಸಲಾಗುವುದು ಎಂದು ರಿಯಾಯಿತಿದಾರರು ಭರವಸೆ ನೀಡಿದ್ದಾರೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ದವರು ವರದಿಸಿರುತ್ತಾರೆ.
ಇ)	ಕುಂದಾಪುರ ನಗರ ಹಾದುಹೋಗುವ ಮೇಲ್ಸೇತುವೆಯಿಂದ ಮಳೆಗಾಲದ ಸಂದರ್ಭದಲ್ಲಿ ನೇರವಾಗಿ ಮಳೆನೀರು ಕೆಳಗಿನ ಸರ್ವೀಸ್ ರಸ್ತೆಗೆ ಬೀಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಅವ್ಯವಸ್ಥೆ ಪರಿಹರಿಸಲು ಕೈಗೊಂಡ ಕ್ರಮವೇನು?	ರಿಯಾಯಿತಿದಾರರು ಗುತ್ತಿಗೆ ಕರಾರಿನಂತೆ ಸರಿಯಾದ ಒಳಚರಂಡಿ ನಿರ್ಮಿಸುವ ಕಾರ್ಯವನ್ನು ಕೈಗೊಂಡಿರುತ್ತಾರೆ. ಸದರಿ ಒಳಚರಂಡಿಯನ್ನು ಮಳೆ ನೀರನ್ನು ರಸ್ತೆ ಮೇಲ್ಭಾಗದಿಂದ ಹೊರಹಾಕಲು ನಿರ್ಮಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ದವರು ವರದಿಸಿರುತ್ತಾರೆ.

ಕಡತ ಸಂಖ್ಯೆ: ಲೋಇ 218 ಸಿಬಿಆರ್ 2021 (ಇ)

(ಸಿ.ಸಿ. ಪಾಟೀಲ್)
ಲೋಕೋಪಯೋಗಿ ಸಚಿವರು